ಕೂಡ ಮಾಡಿದರು; ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆಯನ್ನು ಮಾಡಿದರು. ನಮ್ಮ ಜೀವನಕ್ಕೆ ಗಂಧ ಕೊಡಿ, ಇಲ್ಲದಿದ್ದರೆ ನಮಗೆ ವಿಷ ಕೊಡಿ ಎಂದು ಹೇಳಿದರು. ಅವರುಗಳು ವಿಷ ತೆಗೆದುಕೊಳ್ಳುವ ಸಂದರ್ಭ ಇದೆ. ಇದರ ಬಗ್ಗೆ ಅರಣ್ಯ ಇಲಾಖೆಯ ವಿಶೇಷವಾಗಿ ಗಮನ ಕೊಟ್ಟು ಅವರಿಗೆ ಬೇಕಾಗುವ ಗಂಧವನ್ನು ಒದಗಿಸಿಕೊಡಲು ಪ್ರಯತ್ನಿಸಬೇಕು. ಕಾವೇರಿ ಎಂಪೋರಿಯಂ ಕೂಡ ಇದರ ಮೇಲೆ ನಡೆಯುವಂಥಾದ್ದು. ಅಲ್ಲಿ ಯಾರು ಪ್ರವಾಸಿಗರು ಬರುತ್ತಿಲ್ಲ. ಅಲ್ಲಿರುವುದು ಖಾಲಿಯಾಗುತ್ತಿಲ್ಲ. ಈ ರೀತಿ ಪರಿಸ್ಥಿತಿಯಾಗಿದೆ. ಅರಣ್ಯ ಇಲಾಖೆ ವಿಶೇಷ ಮುತುವರ್ಜಿ ತೆಗೆದುಕೊಂಡು ಗಂಧವನ್ನು ರಿಲೀಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಗಂಧ ನಮ್ಮಲ್ಲಿಲ್ಲ. ಅವರು ಕೋರ್ಟಿನಲ್ಲಿದೆ ಎಂದು ಹೇಳಿದರು. ಆ ಬಗ್ಗೆ ಅದು ಕೋರ್ಟಿನಲ್ಲಿ ತೀರ್ಮಾನವಾಗಬೇಕು. ಅವರು ಕೊಟ್ಟರೆ ಗಂಧ ಮಾತ್ರ ಕೊಡುತ್ತೇನೆ, ವಿಷ ಮಾತ್ರ ಕೊಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ನಾನು ಸ್ಪಷ್ಟವಾಗಿ ಉತ್ತರವನ್ನು ಬರೆದು ತಿಳಿಸುತ್ತೇನೆ.

6. ಶಾಸನ ರಚನೆ

(i) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ, 2000 (ಮುಂದು)

+ ಪ್ರೊ: ಬಿ.ಕೆ. ಚಂದ್ರಶೇಖರ್ (ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ನಾನು ಬಹಳ ಸಂಕ್ಷಿಪ್ತವಾಗಿ ಈ ವಿಧೇಯಕದ ಬಗ್ಗೆ ಮೂರು-ನಾಲ್ಕು ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಉಪಯೋಗಿಸಿಕೊಳ್ಳಬಹುದಾದ ಸಮಯವನ್ನು ಸನ್ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಉಪಯೋಗಿಸಿಕೊಂಡರೆ ನನಗೆ ಹೆಚ್ಚು ಅನುಕೂಲವಾಗುತ್ತದೆ ಎನ್ನುವ ನಂಬಿಕೆಯಿಂದ ಬಹಳ ಸಂಕ್ಷಿಪ್ತವಾಗಿ ಮೂರು-ನಾಲ್ಕು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ನಮ್ಮ ಆಡಳಿತ ವ್ಯವಸ್ಥೆ ಬ್ರಿಟಿಷ್ ವಸಾಹತುಶಾಹಿಯಿಂದ ಬಂದ ಕಲ್ಪನೆಗಳಿಂದ ಕೂಡಿದ ಒಂದು ಆಡಳಿತ ವ್ಯವಸ್ಥೆ; ಕಲೋನಿಯಲ್ ಮೋಡ್ ಆಫ್ ಅಡ್ಮಿನಿಸ್ಟ್ರೇಷನ್ ನಮ್ಮಲ್ಲಿದೆ. ಅದರಿಂದಲೇ ರೂಪಗೊಂಡ ವ್ಯವಸ್ಥೆ ಇದು ಎಂದು ಹೇಳಿದರೆ ತಪ್ಪೇನಾಗುವುದಿಲ್ಲ. ಅದು ಉತ್ಪ್ರೇಕ್ಷೆಯಂತೂ ಖಂಡಿತಾ ಅಲ್ಲ. ಅಂಥ ವಸಾಹತುಶಾಹಿಯ ಒಂದು ಮಾದರಿ ಏನಿದೆ ಅದರ ಕೇಂದ್ರ ಬಿಂದು ಆಡಳಿತದಲ್ಲಿ ರಹಸ್ಯವನ್ನು ಕಾಪಾಡಿಕೊಳ್ಳಬೇಕೆನ್ನುವುದು ಅತ್ಯಂತ ಮುಖ್ಯವಾಗಿ, ಮೌಲಿಕವಾಗಿ ಮುಂದುವರಿದುಕೊಂಡು ಬಂದಿದೆ. ಅದಕ್ಕೆ ಕಾರಣ, ಈ ರಹಸ್ಯ ಅಗತ್ಯ ಎಂದು ಉಳಿಸಿಕೊಂಡು ಬಂದಿದ್ದಾರೆ, ಅದರ ಪರಿಣಾಮ ನಮಗೆ ಕಾಲಕ್ರಮೇಣ ಅರಿವಾಗಿದೆ. ರಹಸ್ಯದಿಂದ ಅತ್ಯಂತ ಮುಖ್ಯವಾಗಿ ಉತ್ತರದಾಯಿತ್ವ ಎನ್ನುವ

ಕಲ್ಪನೆ ಇಲ್ಲವೇ ಇಲ್ಲ. ಬಹುತೇಕವಾಗಿ ಆಡಳಿತದಲ್ಲಿ ಅದು ಮೂಡಿಬಂದೇ ಇಲ್ಲ. ಅಲ್ಲಲ್ಲಿ ಇರಬಹುದು; ಅಕೌಂಟಿಬಿಲಿಟಿ ಎನ್ನುವುದೆಲ್ಲಿಬಿ ಅದೂ ಇಲ್ಲ. ಸುಪ್ರೀಂಕೋರ್ಟ್ ಅದಕ್ಕೆ ಈ ರಹಸ್ಯದ ಬಗ್ಗೆ ಮಾತನಾಡುವಾಗ ಹಲವಾರು ಡಿಸಿಷನ್‌ಗಳಲ್ಲಿ ಹೇಳಿದ್ದಾರೆ. "Disclosures of information in regard to functioning of Government must be the rule and secrecy an exception justified only by te strictest requirement of public interest so demands" ಸುಮ್ಮನೆ ಒಂದು ಡಿಸಿಷನ್‌ನಿಂದ ನಾನು ಇದನ್ನು ಓದಿದೆ. ಇಂಥದ್ದು ಸುಮಾರು ಆರೇಳು ಡಿಸಿಷನ್‌ಗಳಲ್ಲಿ ಪದೇ ಪದೇ ಅವರು ಹೇಳಿಕೊಂಡು ಬಂದಿದ್ದಾರೆ; ಈ ರಹಸ್ಯ ಬೇಡ ಎಂದು. ಜೊತೆಗೆ ಇದೆಂಥ ವಿಚಿತ್ರವಾದ ರಹಸ್ಯವೆಂದರೆ ನಾವು ಸಾಮಾನ್ಯ ಜನರಿಗೆ ಇನ್‌ಫಾರ್ಮೇಷನನ್ನು ಕೊಡುವುದಿಲ್ಲ. ಕೋರ್ಟಿನಿಂದ ಒಂದು ಡೈರೆಕ್ಟೀವ್ ಬಂದಕೋಡಲೇ ಇಡೀ ಫೈಲನ್ನೇ ನಾವು ಕೋರ್ಟ್ ಮುಂದೆ ತೆಗೆದುಕೊಂಡು ಹೋಗಿ ಇಡಬೇಕಾಗುತ್ತದೆ. ಇದೇ ಒಬ್ಬ ಸಾಮಾನ್ಯ ವ್ಯಕ್ತಿ ಕೇಳಿದರೆ, ಇಂಥದಲ್ಲಿ ನನಗೆ ಸ್ವಲ್ಪ ವಿಚಾರ ಹೇಳಿ, ಮಾಹಿತಿ ಬೇಕು, ನಾನು ಮುಂದೆ ಏನು ಮಾಡಬೇಕು ಎನ್ನುವುದನ್ನು ಇತ್ಯರ್ಥ ಮಾಡಬೇಕಾದರೆ ವಿಚಾರ ತಿಳಿದುಕೊಳ್ಳಬೇಕು ಎಂದರೂ ನಾವು ಹೇಳುವುದಿಲ್ಲ. ಇಲ್ಲಿ ನಾವು ಕೊಡುವುದಕ್ಕಾಗುವುದಿಲ್ಲವೆಂದರೆ ಬಹುತೇಕ ಒಂದು ಇಂಪ್ರೇಷನ್ ಇದೆಯಲ್ಲ, ಮಿಡ್ಲ್ ಲೆವೆಲ್ ಅಂಡ್ ಲೋಯರ್ ಲೆವೆಲ್ ಆಫೀಸ್‌ನಲ್ಲಿ concerned case-worker is not here ಎನ್ನುವುದು ಇವೆಲ್ಲಾ ಡಿಕ್ಷನರಿಯಲ್ಲಿ ಬರೆಯಬಹುದಾದ ಒಂದು ಪದ ಪ್ರಯೋಗಗಳಿವು. most unconcerned usually ಅಥವಾ ಅವನು ಇಲ್ಲದಿದ್ದರೆ ಅವನು ರಜಾ ತೆಗೆದುಕೊಂಡಿದ್ದರೆ ಬೇಗ ಹಾಕಿಕೊಂಡು ಹೋಗುತ್ತಾನೆ. ಇದು ನನ್ನ ಸ್ವಂತ ಅನುಭವ ಕೂಡ; ಇಷ್ಟು ವರ್ಷದಲ್ಲಿ ನಮ್ಮ ಕರ್ನಾಟಕ ಸರ್ಕಾರದಲ್ಲಿ ಇವತ್ತಲ್ಲ ಸಾಮಾನ್ಯ 15 ವರ್ಷಗಳ ಹಿಂದೆ. ಇದು ಸಾಮಾನ್ಯವಾಗಿಬಿಟ್ಟಿದೆ. ಆದ್ದರಿಂದ ಒಂದು ಅಕೌಂಟಿಬಿಲಿಟಿಯನ್ನು ತರಬೇಕು, ಅವರು ಯಾವುದೋ ಒಂದು ಕಾರಣಕ್ಕೆ ಒಂದು ರಹಸ್ಯವನ್ನು ಉಳಿಸಿಕೊಳ್ಳಬೇಕು ಎಂದು ಮೂಢನಂಬಿಕೆ ಬಹಳ ವರ್ಷಗಳಿಂದ ಬಂದಿರುವುದು, ಇದನ್ನು ತೆಗೆದುಹಾಕಬೇಕು. ಏಕೆ ತೆಗೆದುಹಾಕಬೇಕೆಂದರೆ ರಹಸ್ಯದಿಂದ ಭ್ರಷ್ಟಾಚಾರ ಬರುತ್ತದೆ; ನಿಧಾನ ದ್ರೋಹದಿಂದ ಭ್ರಷ್ಟಾಚಾರ ಬೆಳೆಯುತ್ತದೆ. Delay breeds corruption, secrecy breeds corruption. ನಾನು ಹೇಳುತ್ತಿರುವುದು ಇದು ಯಾವುದೂ ಹೊಸ ಮಾತಲ್ಲ. ಇದೆಲ್ಲಾ ಹಳೆಯ ಮಾತು. ಇದರಲ್ಲಿ ಯಾವುದೇ ಕ್ರಾಂತಿಕಾರಿಯಾದಂಥ ವಿಚಾರ ಎಂದು ಹೇಳುವಂಥಾದ್ದೂ ಅಲ್ಲ. ಇಂಥ ಪರಿಸ್ಥಿತಿಯಲ್ಲಿ ಕೈಲಾದಷ್ಟು ಬದಲಾವಣೆ ಮಾಡಬೇಕು, ಸುಧಾರಣೆಗೆ ಪ್ರಯತ್ನ ಮಾಡಬೇಕು ಎನ್ನುವ ಉದ್ದೇಶದಿಂದ ಈ ಒಂದು ಪ್ರಯತ್ನವನ್ನು ಈ ಸರ್ಕಾರ ಈ ಸಾರಿ ಮಾಡಿದೆ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಸ್ಪೀಚ್‌ನಲ್ಲಿ "ಈ ಅಧಿವೇಶನದಲ್ಲಿಯೇ ಮಾಹಿತಿ ಪಡೆಯುವ ಹಕ್ಕು ಮಸೂದೆಯನ್ನು ಮಂಡಿಸುತ್ತೇನೆ; "ಹಿಂದಿನ ಆರ್ಥ ಸಚಿವರು ಕಳೆದ

ವರ್ಷ ಮಂಡಿಸಿದ ಮುಂಗಡ ಪತ್ರದಲ್ಲಿ ಹೇಳಿರುವ ಟೆಂಡರ್ ಮತ್ತು ಖರೀದಿಯಲ್ಲಿ ಪಾರದರ್ಶಕತೆ ಕುರಿತ ಕರ್ನಾಟಕ ಕಾಯ್ದೆಯನ್ನು ಕೂಡ ನಾನು ಮತ್ತೊಮ್ಮೆ ಪ್ರಸ್ತಾಪಿಸುತ್ತೇನೆ" ಎಂದು ಹೇಳಿದರು, ಅಂದರೆ ಅದೇನು ಇನ್ನೊಂದು ಆರ್ಡಿನೆನ್ಸ್, ಟೆಂಡರ್ ಟ್ರಾನ್ಸ್‌ಪೆರೆನ್ಸಿ ಬಗ್ಗೆ, ಮಾಹಿತಿ ಪಡೆಯುವ ಹಕ್ಕು ಇವೆಲ್ಲಾ ಸೇರಿ ಬಂದಿದೆ. ಇದು ಗುಡ್ ಗವರ್ನೆನ್ಸ್ ಎಂದು ನಾವೇನು ಮಾತನಾಡುತ್ತೇವೆ, ಬೆಸ್ಟ್ ಪ್ರಾಕ್ಟೀಸ್, ಗುಡ್ ಗವರ್ನೆನ್ಸ್, ಉತ್ತಮ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು ಎನ್ನುವುದು ಅದರ ಅಂಗವೇ. ಇವೆಲ್ಲವೂ ಸೇರಿಕೊಂಡ ಹಾಗೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅವರ ಮನಸ್ಸಿನಲ್ಲಿ ಏನಿತ್ತು, ಇಂಥ ಒಂದು ಮಸೂದೆಯನ್ನು ನಾನು ತರುತ್ತೇನೆ ಎಂದು ಹೇಳಿದಾಗ ಈ ಭ್ರಷ್ಟಾಚಾರವನ್ನು ರಹಸ್ಯವನ್ನು ತಡೆಯುವುದಕ್ಕೆ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಬರಬೇಕು. ಅದಕ್ಕಿಂತ ಬಹಳ ಮುಖ್ಯವಾಗಿ ಜನರ ಪಾಲ್ಗೊಳ್ಳುವಿಕೆ ಇರಬೇಕು. ಸುಮಾರು ಹತ್ತು-ಹನ್ನೆರಡು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಏನು ಬಂತು, ಅಂದರೆ ಹೆಚ್ಚು ಸಕ್ರಿಯವಾಗಿ 1985 ರಲ್ಲಿ ಬಂತು, ಅದರ ಅರ್ಥ ಮತ್ತು ಉದ್ದೇಶ ಕೂಡ ಜನರು ಎಲ್ಲಾ ನಿರ್ಧಾರಗಳಲ್ಲೂ ಪಾಲ್ಗೊಳ್ಳಬೇಕು ಎಂದು, ಇದರಲ್ಲಿ ಹೇಗೆ ಪಾಲ್ಗೊಳ್ಳುವುದು ಆಡಳಿತದಲ್ಲಿ ಎಂದು ಯಾರಾದರೂ ಪ್ರಶ್ನೆ ಕೇಳಿದರೆ ಅಥವಾ ಏಕೆ ಮತ್ತು ಹೇಗೆ ಎಂದರೆ ಸರ್ಕಾರದ ಅಭಿವೃದ್ಧಿ ಯೋಜನೆಗಳೆಲ್ಲಾ (ಸ್ಕೀಮ್ ಆಫ್ ಡೆವಲಪ್‌ಮೆಂಟ್) ಏನು ಇದೆ. ಸರ್ಕಾರದವರ ಪರ್‌ಸ್ಪೆಕ್ಟೀವ್ ಪ್ಲಾನ್ ಇರಬಹುದು, ಯಾವುದೋ ಒಂದು ಯೋಜನೆಯನ್ನು ಮಾಡಿ ಅದನ್ನು ಅನುಷ್ಠಾನಕ್ಕೆ ಬಂದಿರುವ ಒಂದು ಸನ್ನಿವೇಶದಲ್ಲಿ ಇರಬಹುದು; ಅದನ್ನು ಪರಿಶೀಲನೆ ಮಾಡುವ ಹಕ್ಕನ್ನು ಜನರಿಗೆ ಕೊಡಬೇಕು. ಪರಿಶೀಲನೆ ಮಾಡುವ ಹಕ್ಕು ಅವರಿಗೆ ಬರಬೇಕಾದರೆ ಆ ಯೋಜನೆಯ ಬಗ್ಗೆ ಮಾಹಿತಿ ಬೇಕು. ಅದಕ್ಕೆ ಹಣ ಎಲ್ಲಿಂದ ಬಂತು? ಇದರ ಟಾರ್ಗೆಟ್ ಏನು? ಇದನ್ನು ಇಂಪ್ಲಿಮೆಂಟ್ ಮಾಡಿರುವದು ಏಜೆನ್ಸಿ ಯಾವುದು? ಅಥವಾ ಯಾವ ಇಲಾಖೆ? ಟೈಮ್ ಬೌಂಡ್ ಪ್ರೋಗ್ರಾಮ್ ಏನಿದೆ? ಎಲ್ಲಕ್ಕಿಂತ ಮುಖ್ಯವಾಗಿ ಅದರ ಗುಣಾತ್ಮಕ ಮಟ್ಟದ ಬಗ್ಗೆ ಪ್ರಶ್ನೆ ಕೇಳುವುದು. ಪರಿಶೀಲನೆ, ಲೆಕ್ಕ ತಪಾಸಣೆ, ವಿಶ್ಲೇಷಣೆ ಜೊತೆಗೆ ಸರ್ಕಾರದ ಕಾರ್ಯಕ್ರಮಗಳು ಸಾರ್ವಜನಿಕ ಹಿತಾಸಕ್ತಿಯಿಂದ ಮೂಡಿವೆಯೇ? ಮತ್ತು ಸಾಮಾಜಿಕ ನ್ಯಾಯ ಎನ್ನುವ ಕಲ್ಪನೆಯನ್ನು ನಾವೆಲ್ಲರೂ ಒಪ್ಪಿಯಾಗಿದೆ. ಅದರ ಬಗ್ಗೆ ಅಭಿ ನಿರ್ವಿವಾದ. ಅದು ಈ ಕಾರ್ಯಕ್ರಮದಲ್ಲಿ ಯಾವುದಾದರೂ ಒಂದು ರೀತಿ ಕಿಂಚಿತ್ತಾದರೂ ಮುಂದುವರೆಯುತ್ತದೆಯೇ ಎನ್ನುವ ಪ್ರಶ್ನೆಗಳನ್ನು ಕೇಳಬೇಕಾದರೆ ಜನರಿಗೆ ನಾವು ಈ ಮಾಹಿತಿ ಹಕ್ಕನ್ನು ಕೊಡಬೇಕು ಎಂದು ನನಗೆ ಅನ್ನಿಸುತ್ತದೆ. ಅದರಿಂದ ಕೊಂಚವಾದರೂ ಬದಲಾವಣೆ ತರಬೇಕು ಎನ್ನುವ ಒಂದು ಉದ್ದೇಶದಿಂದ ಈ ವಿಧೇಯಕವನ್ನು ತಂದಿರುವುದು. ಎಂದು ವಿಚಾರವನ್ನು ನಾವು ತಿಳಿದುಕೊಳ್ಳಬೇಕು. ಇದರಲ್ಲಿರುವ ಪೆನಾಲ್ಟಿ ಕ್ಲಾಸ್ ಇದೆಯಲ್ಲಾ, ಎರಡು ಪೆನಾಲ್ಟಿ

ಹಾಕಬೇಕು ಎಂದು ಮಾಡಿದ್ದೇವಲ್ಲಾ, ಅದೆಲ್ಲದರ ಒಟ್ಟು, ಬ್ರಾಡ್ ಆಗಿ ಗಮನದಲ್ಲಿಟ್ಟುಕೊಳ್ಳಬೇಕಾದ್ದು, ಈ ವಿಧೇಯಕದ ಉದ್ದೇಶ ಯಾವುದೇ ಒಬ್ಬ ವ್ಯಕ್ತಿಯನ್ನು ಶಿಕ್ಷೆಗೊಳಪಡಿಸಬೇಕು ಎನ್ನುವುದಲ್ಲ. ಅದು ಬೇರೆ ಲೆಜಿಸ್ಲೇಶನ್ಸ್, ಸಿವಿಲ್ ಸರ್ವಿಸ್ ಕಾಂಡಕ್ಟ್ ರೂಲ್ಸ್ ಇದೆ, ಇನ್‌ವೆಸ್ಟಿಗೇಟಿವ್ ವರ್ಕ್ ಮಾಡುವುದಕ್ಕೆ ಲೋಕಾಯುಕ್ತ ಇದೆ, ಮತ್ತೊಂದೆಡೆ ಪ್ರಿವೆನ್‌ಶನ್ ಆಫ್ ಕರಪ್ಷನ್ ಆಕ್ಟ್ ಇದೆ. ಭ್ರಷ್ಟಾಚಾರವನ್ನು ಇದು ಯಾವ ರೀತಿ ಟ್ಯಾಕಲ್ ಮಾಡುತ್ತದೆಂದರೆ, ಜನರಿಗೆ ಇನ್‌ಫರ್ಮೇಶನ್ ಕೊಡುವುದರ ಮೂಲಕ ಮಾತ್ರ. ಏಕೆಂದರೆ, ಇಷ್ಟು ದಿವಸ ಕಛೇರಿಯೊಳಗಡೆ ಏನೆಲ್ಲಾ ನಡೆಯುತ್ತಿತ್ತು, ಇದನ್ನು ಕೊಂಚಮಟ್ಟಿಗೆ ಬಯಲುಗೊಳಿಸುವ ಒಂದು ವ್ಯವಸ್ಥೆ. ಜನರು ಜವಾಬ್ದಾರಿಯಿಂದ ಕೇಳಿದಾಗ ಯಾವುದೇ ವಿಚಾರದಲ್ಲಿ ಮಾಹಿತಿ ಕೊಡಬೇಕೆಂಬುದೇ ಇದರ ಮುಖ್ಯ ಹಿನ್ನಲೆ. ನಾಲ್ಕೈದು ಪ್ರಮುಖ ಅಂಶಗಳು ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಸಾರ್ವಜನಿಕ ಸಂಸ್ಥೆಗಳೇನಿವೆ, ಅದರ ಬಗ್ಗೆ ಕಲಂ 3ರಲ್ಲಿದೆ. ಕೆಲವು ಮಾಹಿತಿಗಳನ್ನು ಅವರು ಕಡ್ಡಾಯವಾಗಿ ಪ್ರಕಟಿಸಬೇಕು. ಇದು ಮ್ಯಾಂಡೇಟರಿ ಡಿಸ್‌ಕ್ಲೋಷರ್ ಪ್ರಾವಿಷನ್. ರಾಜ್ಯ ಸರ್ಕಾರದ ಬೇರಾವುದೇ ಮಾಹಿತಿ ಪಡೆಯುವ ಹಕ್ಕು ಈ ವಿಧೇಯಕದಲ್ಲಿಲ್ಲ. Certain basic things about the Board or Corporation ಇದರ ಬಗ್ಗೆ ಯಾರು ಕೇಳದಿದ್ದರೂ ಕೂಡ ಆಟೋಮ್ಯಾಟಿಕ್ ಆಗಿ ಅವರು ಪ್ರಕಟಿಸಬೇಕು, ನೋಟೀಸ್ ಬೋರ್ಡಿನಲ್ಲಿ ಹಾಕಿಸಬೇಕು ಅಥವಾ ಪತ್ರಿಕೆಗಳಲ್ಲಿ ಹಾಕಿಸಬೇಕು. ಇದು ಇರುವುದೇತಕ್ಕೇ? ಅವರು ಏನೇನು ಕೆಲಸ ಮಾಡಿಸುತ್ತಿದ್ದಾರೆ? ಯಾವ್ಯಾವ ಮೇಜರ್ ಕಾಂಟ್ರಾಕ್ಟ್ಸ್ ತೆಗೆದುಕೊಂಡಿದ್ದಾರೆ? ಮುಂತಾದ ಮಾಹಿತಿಗಳನ್ನು ಕೊಡುವುದು. ಅನಂತರ, ಇದಕ್ಕೆ ವಿನಾಯಿತಿಗಳು ಬಹಳ ಕಡಿಮೆ ಇದೆ. ಉದಾಹರಣೆಗೆ, ತಮಿಳುನಾಡಿನ ವಿಧೇಯಕವನ್ನು ನೋಡಿದರೆ ಸುಮಾರು 12 ವಿನಾಯಿತಿಗಳಿವೆ, ನಮ್ಮ ವಿಧೇಯಕವನ್ನು ಗಮನಿಸಿದರೆ ಅತ್ಯಂತ ಕಡಿಮೆ ಇದೆ. ಸಾಂಪ್ರದಾಯಿಕವಾಗಿ ಕೊಡುವ ವಿನಾಯಿತಿಗಳು, ಈ ದೇಶದ ಸಾರ್ವಭೌಮತ್ವಕ್ಕೆ ಯಾವುದಾದರೊಂದು ರೀತಿಯಲ್ಲಿ ಕುಂದು ಬರುವಂಥ ರೀತಿಯಲ್ಲಿ ಮಾಹಿತಿ ಕೇಳಿದರೆ ಕೊಡುವಂತಿಲ್ಲ. ಸದನಗಳ ಪ್ರಿವಿಲೇಜಸ್ ಏನಾದರೂ ಉಲ್ಲಂಘನೆಯಾಗುತ್ತದೆ ಎನ್ನುವ ರೀತಿಯಲ್ಲಿದ್ದರೆ ಅಂತಹ ಮಾಹಿತಿಯನ್ನು ಕೊಡುವಂತಿಲ್ಲ. ಎಲ್ಲ ಮಸೂದೆಯಲ್ಲಿರುವ ವಿನಾಯಿತಿಗಳೇ ಇದರಲ್ಲೂ ಇದೆ. ಕೇಂದ್ರ ಸರ್ಕಾರದವರು ಒಂದು ಡ್ರಾಫ್ಟ್ ಮಾಡಿದ್ದು, ಅದು ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿದೆ, ಅದು ಬರುವುದಕ್ಕೆ ಇನ್ನು ಬಹಳ ದಿವಸಗಳಾಗುತ್ತದೆ, ಆರೇಳು ತಿಂಗಳು, ಅಥವಾ ವರ್ಷವಾದರೂ ಆಗಬಹುದು. ಅದನ್ನೂ ಮಂಡಿಸುತ್ತೇವೆಂದು ಹೇಳಿದ್ದಾರೆ, ಆದರೆ, ಕಷ್ಟವೆಂದು ನನಗನ್ನಿಸುತ್ತದೆ. ಏಕೆಂದರೆ, ಬೇರೆ ಬೇರೆ ಪಕ್ಷಗಳು ಬೇರೆ ಬೇರೆ ರೀತಿಯ ಅಜೆಂಡಾಗಳನ್ನು ಇಟ್ಟುಕೊಂಡು ಚರ್ಚಿಸುತ್ತಿವೆಯೆಂದು ನನಗೆ ತಿಳಿದುಬಂದಿದೆ. ಕೇಂದ್ರದ ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಸಚಿವರಾಗಿರುವ ಮಾನ್ಯ ಅರುಣ್ ಜೈಟ್ಲಿ ಅವರೊಡನೆ ಎರಡು ಸಲ ನಾನು ಚರ್ಚಿಸಿದ್ದೇನೆ. ನಾವು ಯಾವ

ಇನ್‌ಫರ್ಮೇಷನ್ ಕೊಡುತ್ತೇವೆಂದರೆ, ಡಿಸ್ಕೆಟ್ ಇರಬಹುದು, ಫ್ಲಾಪಿಗಳಿರಬಹುದು, ಎಲೆಕ್ಟ್ರಾನಿಕ್ ಮೋಡ್ ಇರಬಹುದು, ಅಂತಹ ಮಾಹಿತಿ ಕೊಡಬೇಕು ಎನ್ನುವುದಾಗಿದೆ. ಬೇರೆ ಯಾವುದೇ ಡಾಕ್ಯುಮೆಂಟ್ಸ್ ಇರಬಹುದು, ಬೇರೆ ರೀತಿಯ ದಾಖಲೆಗಳನ್ನೆಲ್ಲವನ್ನೂ ಸರ್ಟಿಫೈಡ್ ಕಾಪೀಸ್ ಅಂಡ್ ರೆಕಾರ್ಡ್ಸ್ ಕೊಡಬೇಕು. ಅದಕ್ಕೆ ಕೊಡಬೇಕಾದ ಶುಲ್ಕ ಸಹ ಕಡಿಮೆ ಇದೆ. actual cost of supplying the information ಎನ್ನುವ ರೀತಿಯಲ್ಲಿ ಇದರಲ್ಲಿ ನಾವು ಬರೆದಿದ್ದೇವೆ, ಇದಕ್ಕೆ ಹೆಚ್ಚು ಹಣ ವಿಧಿಸಬಾರದು. ಸಾಮಾನ್ಯ ಜನರು ಇದನ್ನು ಬಳಸಿಕೊಳ್ಳುವ ರೀತಿಯ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಇದೊಂದು ಮಧ್ಯಮ ವರ್ಗದ ಒಂದು ಹಾಯಿದೆಯಾಗಬಹುದೆನ್ನುವ ಭಯದಿಂದ ..... ಉದ್ದೇಶ ಅದಲ್ಲ. ಈಗ ರಾಜಸ್ಥಾನದಲ್ಲಿರಬಹುದು, ಮಧ್ಯಪ್ರದೇಶದಲ್ಲಿರಬಹುದು; ಈ ರಾಜ್ಯಗಳವರು ಕೃಷಿ ಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದಾರೆ. ರಾಜಸ್ಥಾನದಲ್ಲಿ ಸುಮಾರು 8-10 ವರ್ಷಗಳ ಕಾಲಹೊಡೆದಾಡಿದ ಬಳಿಕ ಇಂತಹ ಒಂದು ವಿಧೇಯಕವನ್ನು ಇತ್ತೀಚೆಗೆ ಅಂಗೀಕರಿಸಿಕೊಂಡಿದ್ದಾರೆ. ಆದರೆ, ಕರ್ನಾಟಕದಲ್ಲಿ ಆ ರೀತಿಯಲ್ಲಿ ಯಾವುದೇ ಡಿಮ್ಯಾಂಡ್ ಬಂದಿಲ್ಲದಿದ್ದರೂ, ಸನ್ಮಾನ್ಯ ಮುಖ್ಯಮಂತ್ರಿಗಳೇ ಸ್ವಯಂಪ್ರೇರಣೆಯಿಂದ ಈ ಒಂದು ಮಸೂದೆಯನ್ನು ತಂದಿದ್ದಾರೆ. ಇದನ್ನು ತರಬೇಕೆಂದು ಯಾವ ಶಾಸಕರೂ ಸಹ ಡಿಮ್ಯಾಂಡ್ ಮಾಡಿಲ್ಲ, ಹೊರಗಡೆಯಿರುವ ಸಾಮಾನ್ಯ ಜನರು ಸಹ ಇದರ ಬಗ್ಗೆ ಕೇಳಲಿಲ್ಲ. ಎನ್.ಜಿ.ಓ ಅವರು ಇದನ್ನು ಕೇಳಿದ್ದಾರೆ. ಗ್ರೌಂಡ್ ಲೆವೆಲ್‌ನಲ್ಲಿ ಮೂವ್‌ಮೆಂಟ್ ಇಲ್ಲವೆಂಬುದು ತಮಗೂ ಗೊತ್ತಿದೆ. ಆದಕ್ಕೋಸ್ಕರವೇ ನನಗೆ 1985ರ ಲೆಜಿಸ್ಲೇಶನ್ ಜ್ಞಾಪಕ ಬರುವುದು. ಯಾರೂ ಕೇಳಿರಲಿಲ್ಲ. It was imposed from above. ಮಾನ್ಯ ರಾಮಕೃಷ್ಣ ಹೆಗಡೆ ಮತ್ತು ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರು ಇಬ್ಬರೂ ಸೇರಿ ಮಾಡಿದ್ದರಲ್ಲ, ಅದರ ಬಗ್ಗೆ ಹಲವಾರು ಹಿತಾಸಕ್ತಿಗಳಿಗೆ ಏನೆಂದು ಗೊತ್ತಾಗುವ ಮುನ್ನವೇ ಅದು ಅಸ್ತಿತ್ವಕ್ಕೆ ಬಂದಿತ್ತು. ಕರ್ನಾಟಕದಲ್ಲಿ ಒಂದು ರೀತಿಯ ಪ್ರಗತಿಪರ ವಾತಾವರಣವಿರುವುದರಿಂದ ಇಂತಹ ಕೆಲಸಗಳು ಆಗುತ್ತದೆಂದು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ನನಗೆ ವೈಯಕ್ತಿಕವಾಗಿ ಭರವಸೆ ಕೊಟ್ಟಿದ್ದು, ಅದು ನಿರೀಕ್ಷೆಯಂತೆ. ಅನಂತರ, ಮಾಹಿತಿ ಕೊಡದೆ ಹೋದರೆ ಏನು ಮಾಡಬಹುದು ಎನ್ನುವುದಕ್ಕೂ ಅವರಿಗೆ ಎರಡು ಅಪೀಲ್‌ಗಳನ್ನು ಕೊಟ್ಟಿದ್ದೇವೆ. ಮೊದಲು ಮೂವತ್ತು ದಿವಸದೊಳಗೆ ಕೊಡಬೇಕೆಂದಿತ್ತು. ವಿಧಾನ ಪರಿಷತ್ತಿನಲ್ಲಿ ಅದು ಮಾರ್ಪಾಟಾಗಿ ಹದಿನೈದು ಕೆಲಸಗಳ ದಿನದೊಳಗೆ ಕೊಡಬೇಕೆಂದು ಮಾಡಿದ್ದೇವೆ. ಇಲ್ಲದಿದ್ದರೆ, ಅವರ ಸುಪೀರಿಯರ್ ಆಫೀಸರ್ ಯಾರು ಇರುತ್ತಾರೆ, ಡಿಪಾರ್ಟ್‌ಮೆಂಟ್ ಹೆಡ್ ಇರಬಹುದು, ಮತ್ತೊಬ್ಬರಿರಬಹುದು, ಇವರಿಗೆ ಹದಿನೈದು ದಿವಸದೊಳಗೆ ಅಪೀಲ್ ಹಾಕಬೇಕು. ಅದು ಆಗದಹೋದರೆ ಕೆ.ಎ.ಟಿ.ಗೆ....ಕೆಲವು ಮಾನ್ಯ ಸದಸ್ಯರು ಲೋಕಾಯುಕ್ತಕ್ಕೆ ಕೊಡಬೇಕಾಗಿತ್ತೆಂದರು. ನಾನು ಆಗಲೇ ಹೇಳಿರುವಂತೆ ಅದು ಇನ್ವೆಸ್ಟಿಗೇಟಿವ್ ಏಜೆನ್ಸಿ ಆಗುತ್ತದೆ. ಕೆ.ಎ.ಟಿ. ಯಾಗಿದ್ದರೆ

ಸಿವಿಲ್ ಸರ್ವೀಸ್ ಕಾಂಡಕ್ಟ್ ರೂಲ್ಸ್‌ನಲ್ಲಿ ಇಂಟರ್‌ಫ್ರಿಟ್ ಮಾಡುವ ಕೆಲಸ ಅವರದಾಗಿದ್ದು ಬಹುತೇಕ ಅದೇ ಕೆಲಸ ಮಾಡುತ್ತಿರುತ್ತಾರೆ. ಆದೊಂದು quasi judicial authoriy independent of the Government. ಆದು ಇರಲೆಂದು ಆ ಕೆಲಸ ಮಾಡಿದ್ದೇವೆ. ಹಾಗೆಯೇ, ಅವರು ಮಾಹಿತಿ ಕೊಡದೆ ಹೋದರೆ ಅವರಿಗೆ ಎರಡು ಸಾವಿರ ರೂಪಾಯಿಗಳವರೆಗೆ ಪೆನಾಲ್ಟಿ ಇಂಪೋಸ್ ಮಾಡಿದ್ದೇವೆ. ಪೆನಾಲ್ಟಿಯನ್ನು ಮ್ಯಾಂಡೇಟರಿಯಾಗಿ ಇಂಪೋಸ್ ಮಾಡಬಹುದಾಗಿದೆ ಮತ್ತು ಮಾಹಿತಿ ನೀಡಲು ಯಾವ ಅಧಿಕಾರಿ ವಿನಾಕಾರಣ ನಿರಾಕರಿಸುತ್ತಾರೋ, ಅಲ್ಲಿ ಪೆನಾಲ್ಟಿ ಜಾಸ್ತಿ ಇರಬೇಕೆಂದು ಕೆಲವರ ಅಭಿಪ್ರಾಯವಿದೆ. ನಾನು ಏತಕ್ಕೆ ಈ ಕನ್‌ಕ್ಲೂಶನ್‌ಗೆ ಬಂದೆನೆಂದರೆ, ನಮ್ಮ ದೇಶದ ಎಲ್ಲಾ ಕಾನೂನುಗಳನ್ನು ಹಾಗೂ ಇತರ ನಾಲ್ಕೈದು ದೇಶಗಳ ಕಾನೂನುಗಳನ್ನು ತೆಗೆದುಕೊಂಡು ಅಭ್ಯಾಸ ಮಾಡಿ ನೋಡಿದ ನಂತರ ನಮ್ಮ ನೆಲದ ಮಟ್ಟದಲ್ಲಿ ಏನಾಗಬಹುದೆಂದು ವಿಚಾರ ಮಾಡಿ ಈ ರೀತಿ ಹಾಕಿದ್ದೇವೆ. ಇದರಲ್ಲಿ ಮುಖ್ಯವಾದ ಎರಡು ವಿನಾಯಿತಿಗಳಿವೆ. ಸಚಿವ ಸಂಪುಟದಲ್ಲಿ ತೀರ್ಮಾನವಾದ ವಿಷಯಗಳ ಬಗ್ಗೆ ವಿವರಗಳು ಯಾರಿಗೂ ಸಿಗುವುದಿಲ್ಲ. ಈ ದೇಶದ ಗೋವಾ ರಾಜ್ಯದಲ್ಲಿ ಮಾತ್ರ ಈ ರೀತಿಯ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಏನೆಂದರೆ, ಆ ರಾಜ್ಯದ ಸಾಕ್ಷರತೆಯ ಪ್ರಮಾಣ ಹೆಚ್ಚಿದೆ. ಅದು ಚಿಕ್ಕ ರಾಜ್ಯವಾಗಿರುವುದರಿಂದ ಅಲ್ಲಿ ಯಾವ ಕಾರಣಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನವಾದ ವಿಷಯಗಳ ವಿವರಗಳನ್ನು ಮಸೂದೆ ಮುಖಾಂತರ ಕಲ್ಪಿಸಿಕೊಟ್ಟರೋ ನನಗೆ ಗೊತ್ತಿಲ್ಲ. ಬೇರೆಲ್ಲೂ ಕೂಡ ಆ ರೀತಿಯ ವ್ಯವಸ್ಥೆಯಿಲ್ಲ. ಯುನೈಟೆಡ್ ಕಿಂಗ್‌ಡಮ್‌ನ ಪಾರ್ಲಿಮೆಂಟ್‌ನಲ್ಲೂ ಕೂಡ ಈ ಹಕ್ಕು ಕೊಟ್ಟಿಲ್ಲ. ಆದುದರಿಂದ, ಅದನ್ನು ನಾವು ಬಿಟ್ಟಿದ್ದೇವೆ. ಮಸೂದೆಯ 4(2)(ಡಿ)ನಲ್ಲಿ ತಿಳಿಸಿರುವಂತೆ ಡಿಪಾರ್ಟ್‌ಮೆಂಟ್ ಚರ್ಚೆ ಏನಾಗುತ್ತದೆ, ನೋಟ್ಸ್ ಇರಬಹುದು, ಎವಿಡೆನ್ಸ್ ಇರಬಹುದು, ಒಪಿನಿಯನ್ ಇರಬಹುದು; ನಿರ್ಧಾರವಾದ ನಂತರ ಅದರ ಪ್ರತಿಗಳು ಸಿಗಬೇಕೆನ್ನುವ ರೀತಿಯಲ್ಲಿ ಮಾಡಿದ್ದೇವೆ. ಅನಂತರ, ಟ್ರೇಡ್ ಅಂಡ್ ಕಮರ್ಷಿಯಲ್ ಸೀಕ್ರೆಟ್ಸ್, ಇದೂ ಕೂಡ ಪ್ರತಿಯೊಂದು ಲೆಜಿಸ್ಲೇಶನ್‌ನಲ್ಲೂ ಇದೆ. ಟ್ರೇಡ್ ಅಂಡ್ ಕಮರ್ಷಿಯಲ್ ಸೀಕ್ರೆಟ್ಸ್, ಇದ್ದರೆ ಅದರ ಬಗ್ಗೆಯೂ ಮಾಹಿತಿ ಕೊಡಬಾರದೆಂದು ಇದೆ. ಯಾರೂ ಕೂಡ ಇದನ್ನು ಹೆದರಿಕೊಂಡು ನೋಡುವಂಥ ವಿಚಾರವಲ್ಲವೆಂದು ನನಗನ್ನಿಸುತ್ತದೆ. ಯಾರೇ ಕೈಗಾರಿಕೋದ್ಯಮಿಗಳಾಗಲಿ, ಬೇರೆಯವರಾಗಲಿ, ಕಡ್ಡಾಯವಾಗಿ ಇನ್‌ಫರ್ಮೇಷನ್ ಅನ್ನು ಜನರಿಗೆ ಕೊಡಬೇಕೆಂಬುದೇ ನಮ್ಮ ಉದ್ದೇಶ ಮತ್ತು ಇದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಸದಸ್ಯರುಗಳು ಈ ವಿಧೇಯಕವನ್ನು ಬೆಂಬಲಿಸಿ ಅಂಗೀಕರಿಸಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

7. ಪ್ರಕಟಣೆ

ಅಧ್ಯಕ್ಷರು :— ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.